ಹೇಳಿಕೊಳ್ಳಲಾಗದ ಕಸಿವಿಸಿ. ಹಿರಿ ಮಗ ಇದೇ ಊರಲ್ಲಿ ಕಾಯಂ ಆಗಿ ಇರುವವನು. ಜೊತೆಗೆ ಸೊಸೆ ಇದ್ದಾಳೆ. ಮೊಮ್ಮಗ ಇದ್ದಾನೆ. ಇರುವುದಕ್ಕೆ ತಮ್ಮ ಹೆಸರಲ್ಲೇ ಇರುವ ಸ್ವಂತ ಮನೆ ಇದೆ. ಆದರೂ ಯಾಕೆ ತಳಮಳ? ಇಂತಾದ್ದೇ ನಿರ್ದಿಷ್ಟ ಕಾರಣವೆಂದು ಕಂಡುಕೊಳ್ಳಲಾಗುತ್ತಿಲ್ಲ ಸುವರ್ಣನಿಗೆ. ನಗಣ್ಯವೆನಿಸುವ ಸಣ್ಣಪುಟ್ಟ ಘಟನೆಗಳೆಲ್ಲಾ ನೆನಪಿನ ಮೇಲ್ಪದರಕ್ಕೆ ಬರತೊಡಗಿವೆ. ಕೆಲಸದವಳು ರಜಾ ಹಾಕಿದಾಗ ಬೆಳಿಗ್ಗೆ ಬೇಗ ಎದ್ದು ಮುಸುರೆಪಾತ್ರೆಗಳನ್ನು ತೊಳೆದಿಡುತ್ತಿದ್ದ ಕಸ್ತೂರಿಗೆ ತನ್ನ ಕೋಮಲ ಕರಗಳ ಅಂದ ಕಾಪಾಡಿಕೊಳ್ಳಬೇಕೆಂಬ ಪ್ರಜ್ಞೆ ಕಾಡುತ್ತಿರಲಿಲ್ಲ. ಕೈ ಒರಟಾಗುತ್ತದೆ, ಉಗುರು ಅಂದಗೆಡುತ್ತದೆ ಎಂದು ಯೋಚಿಸಿದವಳಲ್ಲ ಕಸ್ತೂರಿ. ಮೂರು ತಿಂಗಳಿಗೊಮ್ಮೆ ಚೆಕಪ್‌ಗೆ ಹೋಗಬೇಕಾದ ಸಂದರ್ಭದಲ್ಲಿ ಸುವರ್ಣ ನಿರ್ಲಕ್ಷ್ಯ ವಹಿಸಿದರೆ ಅವಳೇ ನೆನಪಿಸಿ, ಒತ್ತಾಯಿಸಿ, ಗಂಡುಮಕ್ಕಳಿಗೆ ಪುರುಸೊತ್ತಿಲ್ಲದಿದ್ದರೆ ತಾನೇ ಜೊತೆಗೆ ಬಂದು, ಬ್ಯಾಂಕಿನಿಂದ ಮನೆಗೆ ಬರುವಾಗ ಅತ್ತೆಗೆಂದೇ ಖರೀದಿಸಿ ತರುತ್ತಿದ್ದ ಹಣ್ಣುಹಂಪಲುಗಳು. 'ಮಾತ್ರೆ ಏನಾದ್ರೂ ತರ್ಬೇಕಾ? ಖಾಲಿಯಾಗಿದ್ಯಾ?' ಎನ್ನುವ ವಿಚಾರಣೆಯಲ್ಲಿ ಗೋಚರಿಸುತ್ತಿದ್ದ ಕಾಳಜಿ. ಕೊನೆಗೆ ತನ್ನ ಬಟ್ಟೆಬರೆ ಐರನ್‌ಗೆ ಕೊಡುವಾಗಲೂ "ಅಮ್ಮಾ, ನಿಮ್ದೇನಾದ್ರೂ ಬಟ್ಟೆ ಉಂಟಾ?" ಎಂದು ಕೇಳಬೇಕಾದ ಅಗತ್ಯ ಅವಳಿಗೇನಿತ್ತು? ಪುರುಸೊತ್ತಿದ್ದಾಗ ತಮ್ಮ ಹಾಸಿಗೆಯ ಮೇಲ್ಹಾಸು ಕೊಡವಿ, ಹೊದಿಕೆ ಜೋಡಿಸಿಡುತ್ತಿದ್ದಂತಾ ತೀರಾ ಸಾಮಾನ್ಯ ಸಂಗತಿಯೂ ಮನಸ್ಸನ್ನು ಆರ್ದ್ರಗೊಳಿಸುತ್ತಿರುವುದು ಯಾಕೆ? ಬೆಚ್ಚನೆಯ ಭದ್ರತಾಭಾವನೆ ಕೊಡುವ ಪ್ರೀತಿ ಯಾರಿಗೆ ಹಿತವಾಗುವುದಿಲ್ಲ? ಅದರಲ್ಲೂ ವಯಸ್ಸು ಮಾಗುತ್ತಾ ಬಂದ ಹಾಗೆ ಎರಡು ಒಳ್ಳೆಯ ಮಾತಾಡುವವರು ಆಪ್ತರೆನಿಸಿಬಿಡುತ್ತಾರೆ. ಕಣ್ಣಂಚನ್ನು ಹಸಿಯಾಗಿಸುತ್ತಾರೆ. ಚಿಕ್ಕಪುಟ್ಟ ಝರಿಗಳು ಸೇರಿ ತೊರೆಯಾದಂತೆ ಇಂತಾ ಸಣ್ಣಸಣ್ಣ ಸಂಗತಿಗಳೇ ಒಗ್ಗೂಡಿ ಒಬ್ಬರನ್ನೊಬ್ಬರು ಹೃದಯಕ್ಕೆ ಹಚ್ಚಿಕೊಂಡು ಬಂಧ ಬಿಗಿಯಾಗಲು ಕಾರಣವಾಗುತ್ತವೆಯೇನೋ. ಕಸ್ತೂರಿಯ ಪ್ರೀತಿಗೆ, ವಿಶ್ವಾಸಕ್ಕೆ ತಾನು ಅಭ್ಯಸ್ಥಳಾಗಿಬಿಟ್ಟಿದ್ದೇನೆ. ಹಿರಿಸೊಸೆಯೂ ಒಳ್ಳೆಯವಳೇ. ಆದರೆ ಇಬ್ಬರಲ್ಲಿರುವ ಸೂಕ್ಷ್ಮ ವ್ಯತ್ಯಾಸ ಮಾತಿಗೆ ನಿಲುಕದಿದ್ದರೂ ಅಂತರಂಗಕ್ಕೆ ವೇದ್ಯವಾಗುತ್ತಿದೆ. ಒಬ್ಬಳಿಗೆ ತಾನು ಅತ್ತೆ. ಮತ್ತೊಬ್ಬಳಿಗೆ ಅಮ್ಮ. ಸ್ವಕೇಂದ್ರಿತ ವ್ಯಕ್ತಿತ್ವದ ದೊಡ್ಡವಳಿಗೆ ತಾನು ಮೊದಲು. ಉಳಿದವರು ಆಮೇಲೆ. ಬಾಯ್ಬಿಟ್ಟು ಯಾವ ಅಸಹನೆಯನ್ನೂ ತೋರಿಸಿಕೊಳ್ಳದಿದ್ದ ಕಸ್ತೂರಿ ತನ್ನ ಸ್ವಭಾವದಿಂದಲೇ ಮನಸ್ಸನ್ನು ಗೆದ್ದುಬಿಟ್ಟಿದ್ದಳೇ, ಗೊತ್ತೇ ಆಗದಂತೆ? ಕಸ್ತೂರಿ ದೂರವಾಗುತ್ತಿದ್ದಾಳೆಂಬ ಕಾರಣದಿಂದ ಈ ಸ್ಪಷ್ಟನೆ ಕಂಡುಕೊಳ್ಳುತ್ತಿದೆಯೇ ಮನಸ್ಸು? ತಾನು ಕಸ್ತೂರಿಗೆ ಅನ್ಯಾಯ ಮಾಡಿದೆ. ಅವಳ ಕುರಿತಾಗಿ ಪಕ್ಷಪಾತ ಧೋರಣೆ ತೋರಿಸಿದೆ. ಸೌಂದರ್ಯ ಇರುವುದು ಬರಿಯ ಬಾಹ್ಯರೂಪದಲ್ಲಿ ಮಾತ್ರವಲ್ಲ, ಅಂತರಂಗದಲ್ಲೂ ಇರುತ್ತದೆ ಎಂದು ಕಂಡುಕೊಳ್ಳದಿದ್ದ ಮೇಲೆ ವಯಸ್ಸಾಗಿದ್ದು ಯಾವ ಸಾರ್ಥಕತೆಗೆ? ಪಾಪಪ್ರಜ್ಞೆಯಿಂದಲೆಂಬಂತೆ ಮಂಕಾಗಿಬಿಟ್ಟರು ಸುವರ್ಣ. ಅತ್ತೆಯಲ್ಲಿ ಎಂದಿನ ಲವಲವಿಕೆ ಇಲ್ಲ ಎಂದು ಮೊದಲು ಗಮನಿಸಿದ್ದು ಕಸ್ತೂರಿ.

"ಯಾಕೆ ಅಮ್ಮಾ, ಹುಷಾರಿಲ್ವಾ? ಒಂಥರಾ ಇದೀರಿ..." ಎನ್ನುವ ಅವಳ ಕಳಕಳಿಯ ಮಾತು ಕೇಳಿ ಸುವರ್ಣ ಅಳು ನುಂಗಿಕೊಂಡರು.

★★★

ಕಸ್ತೂರಿ ಬಟ್ಟೆಬರೆ ಜೋಡಿಸಿಕೊಂಡು ಹೊರಡುವ ತಯಾರಿ ನಡೆಸುತ್ತಿದ್ದಳು. ರಾಜೀವ ಅವಳಿಗೆ ಸಹಾಯ ಮಾಡುತ್ತಿದ್ದ. ಸುವರ್ಣ ಸೀದಾ ಕೋಣೆಯೊಳಗೆ ಬಂದು ಮಂಚದ ಮೇಲೆ ಕೂತರು. "ಅಂತೂ ಹೊರಟುಬಿಡ್ತೀರಿ..." ಅಂದರು ಸಣ್ಣ ನಿಟ್ಟುಸಿರಿನೊಂದಿಗೆ.

"ನಾನು ಹೊರಡೋಕೆ ತಡ ಉಂಟು ಅಮ್ಮಾ, ಯೋಚ್ನೆ ಮಾಡ್ಬೇಡ."